# ಡಾ. ಬಿ.ಆರ್ ಅಂಬೇಡ್ಕರ ರವರ 132ನೇ ಜನ್ಮದಿನಾಚರಣೆ

**ಸಕಲೇಶಪುರ ಜೆಎಸ್ಎಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ದಿನಾಂಕ 14-04-2023 ರ ಶುಕ್ರವಾರ ಸಂವಿಧಾನದ ಶಿಲ್ಪಿ ಡಾ. ಬಿ.ಆರ್ ಅಂಬೇಡ್ಕರ ರವರ 132ನೇ ಜನ್ಮದಿನಾಚರಣೆ**ಯನ್ನು ಅತ್ಯಂತ ಸಡಗರ ಹಾಗೂ ಸಂಭ್ರಮದಿಂದ ಆಚರಿಸಲಾಯಿತು.





ಕಾರ್ಯಕ್ರಮದಲ್ಲಿ ಮೊದಲಿಗೆ ಪ್ರಶಿಕ್ಷಣಾರ್ಥಿಗಳಾದ **ಶ್ರೀಮತಿ ಚೈತ್ರ, ಶ್ರೀ ಮಂಜುನಾಥ ಹೆಚ್.ಆರ್ ಮತ್ತು ಶ್ರೀ ಆಂಜನೇಯ ರವರು ಅಂಬೇಡ್ಕರ್ ರವರ ಕುರಿತಾಗಿ ವಿಚಾರ** ಮಂಡಿಸಿದರು.

ಕಾರ್ಯಕ್ರಮದ **ಮುಖ್ಯ ಅಥಿತಿಗಳಾಗಿ ಆಗಮಿಸಿದ ಹಾಸನ ಬ್ರಿಗೇಡ್ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಾದ ಶ್ರೀ ಶಿವರಾಜ್ ಬಿ.ಹೆಚ್** ರವರು ಮಾತನಾಡುತ್ತಾ




ಭಾರತೀಯ ಸಂವಿಧಾನದ ಪಿತಾಮಹ ಎಂದೇ ಕರೆಯಲಾದ ಡಾ. ಭೀಮರಾವ್ ರಾಮ್ ಜಿ ಅಂಬೇಡ್ಕರ್ ತಮ್ಮ ಬಹುಮುಖ ವ್ಯಕ್ತಿತ್ವದಿಂದ ಖ್ಯಾತರಾದವರು. ಅವರು ಸಮಾಜ ಸುಧಾರಕರಾಗಿದ್ದರು ಅಂತೆಯೇ ಅರ್ಥಶಾಸ್ತ್ರ, ಕಾನೂನು ಮತ್ತು ರಾಜಕೀಯದಲ್ಲಿ ಕೆಲಸ ಮಾಡಿದ ಚಾಣಾಕ್ಷ ವ್ಯಕ್ತಿಯಾಗಿದ್ದರು. ಅಂಬೇಡ್ಕರ್ ಒಬ್ಬ ವ್ಯಕ್ತಿ ಮಾತ್ರವಲ್ಲದೆ ಶಕ್ತಿಯಾಗಿದ್ದರು

ಅಂತೆಯೇ ಒಬ್ಬ ಸಮಾಜ ಸುಧಾರಕರಾಗಿ ಭಾರತದ ಹಿಂದುಳಿದ ಜನಸಮೂಹದ ಪ್ರಗತಿಗೆ ಅವಿರತವಾಗಿ ಶ್ರಮಿಸಿದ ಅವರು ಮಹಿಳಾ ಹಕ್ಕುಗಳು ಮತ್ತು ಲಿಂಗ ಸಮಾನತೆಯ ಬಹಿರಂಗ ಬೆಂಬಲಿಗರಾದಿದ್ದರು ಎಂದು ತಿಳಿಸಿದರು.

ಕಾರ್ಯಕ್ರಮದ **ಅಧ್ಯಕ್ಷತೆಯನ್ನು ವಹಿಸಿದ್ದ ಸಹಾಯಕ ಪ್ರಾಧ್ಯಾಪಕರಾದ ಡಾ. ದಿನೇಶ್ ಎಂ.ಕೆ ರವರು** ಮಾತನಾಡುತ್ತಾ ಮಹಿಳೆಯರ ಹಕ್ಕುಗಳು ಮತ್ತು ಲಿಂಗ ಸಮಾನತೆಗಾಗಿ ಹೋರಾಡಿದ ವಕೀಲರಾಗಿದ್ದರು ಅಂತೆಯೇ ಅವರಿಗೆ ಪುರುಷರಂತೆ ಸಮಾನ ಹಕ್ಕುಗಳು ಹಾಗೂ ಅವಕಾಶಗಳನ್ನು ನೀಡಬೇಕು ಮತ್ತು ಗೌರವ ಘನತೆಯಿಂದ ಪರಿಗಣಿಸಬೇಕು ಎಂದು ನಂಬಿದ್ದರು ಹಾಗೂ ಇದಕ್ಕಾಗಿ ಹೋರಾಡಿದಷ್ಟೇ ಅಲ್ಲದೆ ಜನನ ನಿಯಂತ್ರಣ ಮತ್ತು ಕುಟುಂಬ ಯೋಜನೆಯಲ್ಲಿ ಮಹಿಳೆಯರ ಆರೋಗ್ಯ ಮತ್ತು ಯೋಗಕ್ಷೇಮವನ್ನು ಸುಧಾರಿಸಲು ಅತ್ಯಗತ್ಯ ಎಂಬುದು ಅವರ ವಾದವಾಗಿತ್ತು ಎಂದು ತಿಳಿಸಿದರು.




ಪ್ರಶಿಕ್ಷಣಾರ್ಥಿ ಶ್ರೀ ಲೋಕೇಶ್ ರವರು ಅಂಬೇಡ್ಕರ್ ಕುರಿತಾಗಿ ಎಲ್ಲರಿಗೂ ಮನಮುಟ್ಟುವಂತಹ ಭಾವನಾಧಾರಿತ ಗಾಯನ ಮಾಡಿದರು.

ಕಾರ್ಯಕ್ರಮದಲ್ಲಿ ಸಂಯೋಜನಾಧಿಕಾರಿಗಳಾದ ಶ್ರೀ ಮಂಜುನಾಥ ಆರ್, ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯ ಸಂಚಾಲಕರಾದ ಶ್ರೀ ಕಾಳೇಗೌಡ, ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರಾದ ಶ್ರೀ ಶಿವಕುಮಾರ ಆರ್, ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ರೇಣುಕ ಆರಾಧ್ಯ, ಡಾ. ಪ್ರಭುಸ್ವಾಮಿ, ಡಾ. ವಿಕ್ರಮ್, ಸಂಸ್ಥೆಯ ಎಲ್ಲಾ ಸಿಬ್ಬಂದಿ ವರ್ಗದವರು ಹಾಗೂ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ಪ್ರಶಿಕ್ಷಣಾರ್ಥಿ ಕುಮಾರಿ ಪೂರ್ವಿಕ ರವರು ಸ್ವಾಗತಿಸಿ, ಕುಮಾರಿ ದೀಪ್ತಿ ನಿರೂಪಿಸಿ ಅಂತಿಮವಾಗಿ ಕುಮಾರಿ ಶಿಲ್ಪ ಹೆಚ್.ಕೆ ರವರು ನೆರೆದಿದ್ದ ಎಲ್ಲರನ್ನೂ ವಂದಿಸಿದರು.

*** _ ***

PRINCIPAL
J.S.S. Institute of Education
P.B. 26, SAKALESHPUR-573 134
Hassan Dist